Regd No. M 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 31 ಸಂಚಿಕೆ 24] ಮಂಗಳವಾರ 21—10—47 [ಬಿಡಿ ಪ್ರತಿ 3 ಪೈ

ಕೊಹಿನೂರು

ಐದು ಸಾವಿರ ವರ್ಷಗಳ ಇತಿಹಾಸ ಪ್ರಸಿದ್ಧವಾದ ಕೊಹಿನೂರು ವಜ್ರ ನುತ್ತ ಟವರ್ ಆಫ್ ಲಂಡನ್ ಸೇರಿತು. ಅತ್ಯಂತ ಮೆಚ್ಚಿಕೆಯಾಗಿರುವ ಆ ವಜ್ರ ಧಾರಕಕ್ಕೆ ಹಿಂದಿರುಗುವುದಿಲ್ಲವೆಂದು ಹೇಳಲಾಗಿದೆ. ಇಂಡಿಯಾ ಮತ್ತು ಪಾಕೀಸ್ತಾನಗಳಲ್ಲಿ ಅಂತಹ ಉನ್ನತ ದರ್ಜೆಯ ವಜ್ರ ಭಾಗವಾಗುವುದು ವ್ಯಸನಪೂರಿತವಾದುದೆಂದು ಹೇಳಲಾಗಿದೆ.

೦೦೦೦೦೦೦೦೦೦೦೦೦೦೦೦೦೦೦

ಮಂತ್ರಿ ಪಟ್ಟಿ

ಬೆಂಗಳೂರು

ಸ್ತ್ರೀಯರಿಗೊಂದು ಮಂತ್ರಿಪದವಿ ಅಗತ್ಯವೆಂದು ಬಾಲಕಿಯರು ಕಾಂಗ್ರೆಸ್ ಅಧ್ಯಕ್ಷರ ಮುಂದೆ ಪ್ರದರ್ಶನ ನಡೆಸಿದರು.

ಮಂತ್ರಿಪಟ್ಟಿಯನ್ನು ಮಹಾಸ್ವಾಮಿಯವರಿಗೆ ಈ ದಿನ ಒಪ್ಪಿಸಲಾಗುವುದು.

ಮಂತ್ರಿಗಳು ಯಾರ್ಯಾರು ? ಎಂಬುದು ಅಧಿಕೃತವಾಗಿ ಇದುವರೆಗೂ ಹೊರಪಟ್ಟಿಲ್ಲ.

ಅಧಿಕೃತ ಮಂತ್ರಿ ಪಟ್ಟಿ ಈ ಸಂಜೆ ಪ್ರಕಟವಾಗಬಹುದು.

ತಾತ್ಕಾಲಿಕ ಸರ್ಕಾರಕ್ಕೆ ಮುಸ್ಲಿಂ ಲೀಗು ಬೆಂಬಲವಿತ್ತಿದೆ.

ಮಂತ್ರಿಮಂಡಲ ರಚನೆ ಬಗ್ಗೆ ಹಿಂದೂ ಮಹಾ ಸಭೆ ಸ್ವಲ್ಪ ವಿರೋಧಸೂಚಿಸಿದೆ.

೦೦೦೦೦೦೦೦೦೦೦೦೦೦೦೦೦೦೦

Edited, Printed and Published by M. S Krishna Rao at the Satyavadi Press Chamaarja Agrahar Mysore.

ಸುದ್ದಿಗಳು

ಸರದಾರ್ ಪಟೇಲರ ಬಂಗಲೆಯಲ್ಲಿ ಒಬ್ಬ ಪಂಜಾಬಿ ಯುವಕನನ್ನು ಶಂಕೆಯ ಮೇಲೆ ಪೋಲೀಸರು ದಸ್ತಗಿರಿ ಮಾಡಿದ್ದಾರೆ.

೦ ೦

ನವದೆಹಲಿ, ಆ 17 ಬಲಬಘಡ ರಹಸೀಲಿನ ಮುಸ್ಲಿಂರು ಪಾಕೀಸ್ತಾನಕ್ಕೆ ಸೆಲಸಲು ಹೋಗಲು ಇಚ್ಛೆಯುಳ್ಳವರಾಗಿಲ್ಲವೆಂದು ಹೇಳಲಾಗಿದೆ

೦ ೦

ರಾಜಧಾನಿಯಲ್ಲಿ ಪ್ರಕಟವಾಗುತ್ತಿದ್ದ 'ವಿಜಯ' ದಿನ ಪತ್ರಿಕೆ ವಿಜಯದಶಮಿ ದಿವಸದಿಂದ ಪುನಃ ಪ್ರಕಟವಾಗುವುದೆಂದು ಸಂಪಾದಕರು ತಿಳಿಸುತ್ತಾರೆ.

೦ ೦

ಸ್ಯೂಸ್‌ಪ್ರಿಂಟ್ ನಿಯಂತ್ರಣವಜ್ಜಿ ವಜವಾಗಬೇಕೆಂದು ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿ ಸಂಘ ನಿರ್ಣಯಿಸಿದೆ.

೦ ೦

ಹದಿನೈದು ದಿವಸಗಳಲ್ಲಿ ಮೈಸೂರು ದೇಶಕ್ಕೆ ಹೊರಗಡೆಯಿಂದ ಗೋಧಿ ಬರಲಿದೆ.

೦ ೦

ರಾಜಕೀಯದಿಂದಾಗಲೀ ಅಧಿಕಾರದಿಂದಾಗಲೀ ನಿವೃತ್ತನಾಗುವುದಿಲ್ಲವೆಂದು ಬಹಿರಂಗವಾಗಿ ಲಕ್ನೋದಲ್ಲಿ ಭಾಷಣ ಮಾಡುತ್ತಾ ಪಂ || ನೆಹರು ತಿಳಿಸಿದರು.

೦ ೦

ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಸತ್ಯಾಗ್ರಹಿಗಳು ಬಿಡುಗಡೆಯಾಗದಿರುವ ಬಗ್ಗೆ ಕಾಂಗ್ರೆಸ್ ಅಧ್ಯಕ್ಷರಿಗೆ ತಾರು ಕೊಡಲಾಗಿದೆ

೦ ೦

ಭಾರತ ಸ್ವಾತಂತ್ರಾವಾದಿ ಪಕ್ಷ ನಾಯಕ ಡಾ || ರಾಂ ಮನೋಹರ ಲೋಹಿಯ ದೆಹಲಿ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ, ಪಾಕೀಸ್ತಾನ 5 ವರ್ಷಗಳಲ್ಲಿ ವಾಯವಾಗುವುದೆಂದೂ ಹಿಂದೂ ಸಂಸ್ಥಾನ ಕೂಗು ಸರಿಯಲ್ಲವೆಂದೂ ತಿಳಿಸಿದರು.

ನಾಳೆ ಸತ್ಯವಾದಿ ಸಂಸ್ಥಾಪಕರ ದಿನಾಚರಣೆ ನಾಡಿದ್ದು ಮಹಾಸನವಿು. ಕಛೇರಿಗೆ ರಜಾ ಕೊಡಲಾಗಿದೆ ಪತ್ರಿಕೆ ಪ್ರಕಟವಾಗುವುದಿಲ್ಲ.

'ಜವಾಬ್ದಾರಿ' ನಮ್ಮದು !

ಮಂತ್ರಿಗಳು ಯಾರು ಯಾರು ? ಅಂತ ಎಲ್ಲಿ ನೋಡಿದರೂ ಕೇಳ್ತಾರೆ. ಆತುರ ಪಡ್ತಾರೆ ! ಯಾರು ಮಂತ್ರಿಯಾದರೇನು ? ಈ ಆತುರ ಏಕೆ ? ಮಂತ್ರಿ ಯಾರೇ ಆಗಲಿ, ಈ ಮಂತ್ರಿಮಂಡಲದ ಬಾಳುವೆಯೆಲ್ಲಾ ಎಂಟು ತಿಂಗಳ ಕಾಲದ್ದು. ಆಮೇಲೆ ಚುನಾವಣೆಯಲ್ಲಿ ಗೆದ್ದು ಬಂದ ದೊಡ್ಡ ಪಂಗಡದ ಮುಖಂಡರಿಂದ ನಿರ್ಮಿತವಾಗುವ ಮಂತ್ರಿಮಂಡಲದಲ್ಲಿ ಯಾರು ಇದ್ದರೂ ಯಾರು ಇಲ್ಲದಿದ್ದರೂ ಬೆಲೆಯೊಂದೇ. ಅದಕ್ಕಾಗಿ ನಾವೇಕೆ ತಲೆ ಸೋಯಿಸಿಕೋ ಬೇಕು ?

ಈಗ ಜನಗಳು ನೋಡಬೇಕಾದುದು ಯಾರ್ಯಾರು ಮಂತ್ರಿಗಳು ಎಂಬುದನ್ನಲ್ಲ. ದೇಶಕ್ಕೆ ಒಳ್ಳೇದನ್ನೇ ಮಾಡುತ್ತೇವೆ ಎಂದು ಹೇಳಿಕೊಂಡು ಮುಂದೆ ಬಂದವರು, ದೇಶದ ಒಳ್ಳಿತಕ್ಕಾಗಿ ಯಾವ್ಯಾವ ಕಾರ್ಯಕ್ರಮವನ್ನು ನಿರ್ಧಾರ ಮಾಡಿ ಮುಂದೆ ಅದನ್ನು ಕಾರ್ಯಕಾರಿ ಮಾಡಲು ಏನೇನು ಏರ್ಪಾಡು ಮಾಡುತ್ತಾರೆ ಎಂಬುದನ್ನು ನೋಡಬೇಕು. ಅದುಂಟಲ್ಲ ಮಜಾ.

ನಮ್ಮ ದೇಶದಲ್ಲಿ ಏನೇನು ಬೇಕು ಎಂಬುದನ್ನು ಈಗ ಲೆಕ್ಕಹಾಕಿ ನೋಡಬೇಕು. ಆ ಪೈಕಿ ತುರ್ತಾಗಿ ಆಗಬೇಕಾದುದೆಲ್ಲಾ ಯಾವುದು ? ಅನ್ನುವುದನ್ನು ನೋಡಬೇಕು. ಅದನ್ನೆಲ್ಲಾ ಮಾಡುವುದೆಂದರೆ ಬಹು ಕಷ್ಟವಿದೆ. ಆದರೂ ಆ ಕಷ್ಟಗಳೆಲ್ಲಾ ಎದ್ದು ಕಾಣದಂತೆ ಕಾರ್ಯಸಾಧನೆ ಮಾಡಬೇಕಾದುದು 'ಜವಾಬ್ದಾರಿ ಸರ್ಕಾರ' ದ ಕರ್ತವ್ಯ.

ಮಂತ್ರಿಗಳೇ ಏನಾದರೂ ಮಾಡ್ತಾರೆ ಎಂತ ಜನಗಳು ತಮ್ಮ ಪಾಡಿಗೆ ತಾವಿದ್ದು ಉದಾಸೀನರಾಗಿರುವುದೂ ಅಲ್ಲ. ಏನೇನು ಆಗಬೇಕೋ ಅದನ್ನೆಲ್ಲಾ ಅವರಿಗೆ ತಿಳಿಸಬೇಕು. ಇಂಥದನ್ನು ಹೀಗೇ ಮಾಡಿ ಎಂದು ಹೇಳಬೇಕು. ಒತ್ತಾಯ ಪಡಿಸಬೇಕು. ಜನಹಿತಕ್ಕೆ ಬೇಕಾದ್ದನ್ನು ಮಾಡಿಸಲೇಬೇಕು. ಇದೇ 'ಜವಾಬ್ದಾರಿ ಸರ್ಕಾರ' ದಲ್ಲಿ ಜನಗಳಿಗಿರತಕ್ಕ 'ಜವಾಬ್ದಾರಿ'.

ಮುಂದಿನ ಮಂತ್ರಿಗಳಿಂದರೆ, ಒಂದೋಬಸ್ತಾಗಿ ಆಫೀಸಿನಲ್ಲಿ ಕೂತುಕೊಂಡು ಜಬರ್ದಸ್ತಾಗಿ ಆಳುವ ಆಫೀಸರ್ ಮಂತ್ರಿಗಳಲ್ಲ. ಬದುಕಿರುವುದಕ್ಕೆ ಸಾಕಾಗುವಷ್ಟು ತಿನ್ನಲು ಅಗತ್ಯವಿದ್ದಷ್ಟು ವೇತನ ತೆಗೆದುಕೊಂಡು ದೇಶಕ್ಕೆ ಸೇವೆಮಾಡುವ ಕೂಲಿಗಳು, ಅವರ ಕೈಲಿ ಸರಿಯಾಗಿ ಕೆಲಸಮಾಡಿಸಿಕೊಳ್ಳುವ ಜವಾಬ್ದಾರಿ ಜನಗಳದು. ಅದಕ್ಕೇ ಹೇಳುವುದು 'ಜವಾಬ್ದಾರಿ ಸರ್ಕಾರ' ಅಂತ.

ದೇಶದ ಉನ್ನತಿಗೆ ಏನೇನು ಬೇಕೊಂತ ನೀವೆಲ್ಲಾ ಒಂದು ಪಟ್ಟಿ ಹಾಕಿರಿ. ನಾನೂ ಒಂದು ಪಟ್ಟಿ ಕೊಡ್ತೀನಿ. ಆಮೇಲೆ ಮಜಾನ 'ಮಜ್ಜಿ'

ದೇವಾದಾಯ ಧರ್ಮಾದಾಯಗಳು

ಹರಿಶ್ಚಂದ್ರ ಮಹಾರಾಯನು ರಾಜ್ಯವನ್ನು ವಿಶ್ವಾಮಿತ್ರನಿಗೆ ಧಾರೆ ಎರೆದಾಗ ದೇವಾದಾಯ ಧರ್ಮಾದಾಯಗಳನ್ನು ತೊಲಗಿಸಿದ್ದನು. ಧರ್ಮರಾಯನು ಸಂಜಯನೊಂದಿಗೆ ಕುಶಲ ಪ್ರಶ್ನೆಯ ಸಮಯದಲ್ಲಿ ದೇವಾದಾಯ ಬ್ರಹ್ಮಾದಾಯಗಳು ಸಲ್ಲುತ್ತಿದೆಯೇ ಎಂದು ಕೇಳಿದ್ದನು. ಶ್ರೀರಂಗರಾಯರು ಮದರಾಸು ನಗರವನ್ನು ಆಂಗ್ಲೇಯರಿಗೆ ಕೊಟ್ಟಾಗ ಬರೆಸಿದ ಶಾಸನದಲ್ಲಿ 'ದೇವಾದಾಯ ಧರ್ಮಾದಾಯಗಳನ್ನು ಕ್ರಮವಾಗಿ ನಡೆಸುವೆವು' ಎಂದು ಒಲಿದಿದೆ. ಆಂಗ್ಲೇಯರು ಎಷ್ಟೋ ಕೂಡದ ಕೆಲಸಗಳನ್ನು ಮಾಡಿದರಾದರೂ, ದೇವಾದಾಯ ಧರ್ಮಾದಾಯಗಳ ವಿಷಯದಲ್ಲಿ ಮಾತ್ರ ಕೈಹಾಕಲಿಲ್ಲ. ಮದರಾಸಿನಲ್ಲಿ ಶಯ್ಯಾಸಿರವ ಜವಿಾನಾರಿ ಬಿಲ್ಲಿನಲ್ಲಿ ದೇವಾದಾಯ ಧರ್ಮಾದಾಯಗಳು ಆ ಪೋಷಣವಾಗಿಲಿವೆ. (ದ್ರಿ)

ವುಡ್‌ಲ್ಯಾಂಡ್ಸ್

ನಲಿಯುವ 4 ನೇ ವಾರ

ರಂಜನೆ — ಜೀವ್ಸ್ — ಬೇಬಿ ಮಾಧುರಿ

ಪಾತ್ರವಹಿಸಿರುವ

ನೈಮಾ

(ಆಮೋಘ ಹಿಂದಿ ಚಿತ್ರ)

ಪ್ರತಿ ದಿನ 2 ಆಟಗಳು

Woodlands

Morning Shows at 10-30

From 21—10—47 For 3 days

Pordon My Past

— starring —

Fred Mac Murray

ತಾ || 20-10-47 || ಶ್ರೀ || ನಂ. 58

"ಪ್ರಬೋಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ

ಸಂಪಾದಕ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇಗಾರತಪಿಶಾರದ
ಸಂಘದ ಕಾರ್ಯದರ್ಶಿ, ದೂರ್ವಾಸಪುರಂ, ಶಿವಮೊಗ್ಗಾ ಜಿಲ್ಲಾ

ಸಾಮ್ಯವಾದಿಯೂ ಸನಾತನಧರ್ಮವೂ

(ಶ್ರೀ ವಸಂತಕುಮಾರ ಚಟ್ಟೋಪಾಧ್ಯಾಯ, ಎಂ.ಎ)

(ಮುಂದುವರಿದುದು)

ಒಂದು ವೇಳೆ ಸಾಮ್ಯವಾದಿಗಳ ಈ ಯುಕ್ತಿಯು ಯಥಾರ್ಥವಾದರೆ, ನಿಜವಾಗಿಯೂ ಲೋಕದಿಂದ ಧರ್ಮಾನುಷ್ಠಾನದ ಹೆಸರು ಹಾರಿಹೋಗುವುದು. ಏಕೆಂದರೆ ಅಂತಹ ಸ್ಥಿತಿಯಲ್ಲಿ ಕೇವಲ ದೇವಾಲಯಗಳು ಇರದಿರುವುದು ಮಾತ್ರವೇ ಅಲ್ಲ, ಮನೆಯಲ್ಲಿ ಕುಳಿತಾವರೂ ದೇವರ ಧ್ಯಾನ ಅಥವಾ ಪೂಜೆ ಮಾಡುವುದೂ ಕೊಡಾ ಸ್ವಾರ್ಥಪರತೆಯ ಕೆಲಸವೆಂದು ತಿಳಿಯಲಾಗುವುದು ಎಷ್ಟು ಹೊತ್ತು ಧ್ಯಾನ ಅಥವಾ ಪೂಜೆ ಮಾಡಲಾಗುವುದೋ, ಅಷ್ಟು ಸಮಯದ ವರೆಗೆ ಒಬ್ಬ ರೋಗಿಯ ಸೇವಾ ಶುಶ್ರೂಷೆಯನ್ನು ಯಾಕೆ ಮಾಡಬಾರದು? ಇಲ್ಲವೇ ದರಿದ್ರ ಸಮಾಜದ ಸಲುವಾಗಿ ಅರ್ಥೋಪಾರ್ಜನೆಯ ಪ್ರಯತ್ನವನ್ನೇಕೆ ಮಾಡಲಾಗದು? ಸಾಮ್ಯವಾದಿಗಳ ಈ ಯುಕ್ತಿಯ ಉತ್ತರವಾಗಿ ಹೀಗೆ ಹೇಳಬಹುದು — ಒಂದು ದೇವಾಲಯವನ್ನಾಗಲಿ ಇಗರ್ಜಿಯನ್ನಾಗಲೀ ಕಟ್ಟಿಸಿದರೆ, ಅನೇಕ ವ್ಯಕ್ತಿಗಳು ಅಲ್ಲಿಗೆ ಹೋಗಿ ದೇವರನ್ನು ಉಪಾಸಿಸಬಹುದು, ಮತ್ತು ಹೀಗೆ ಮಾಡಿ ಸುಖವನ್ನೂ ಮಾನಸಿಕ ಉನ್ನತಿಯನ್ನೂ ಪಡೆಯಬಹುದಾಗಿದೆ ಆಸ್ಪತ್ರೆಯನ್ನಾಗಲಿ ವಿದ್ಯಾಲಯವನ್ನಾಗಲಿ ತೆರೆದು ಸರ್ವಸಾಧಾರಣಂಗೆ ಎಷ್ಟಂ ವಚ್ಚಿಗೆ ಉಪಕಾರ ಮಾಡಬಹುದೋ ದೇವಾಲಯವನ್ನಾಗಲಿ ಇಗರ್ಜಿಯನ್ನಾಗಲಿ ತೆರೆದು ಅದಕ್ಕಿಂತ ಹೆಚ್ಚಿಗೆ ಉಪಕಾರ ಮಾಡಬಹುದಾಗಿದೆ. ಏಕೆಂದರೆ ಒಬ್ಬ ವ್ಯಕ್ತಿಯಲ್ಲಿ ಧರ್ಮಭಾವನೆಯನ್ನು ವೃದ್ಧಿಗೊಳಿಸಿ ಅವನಿಗೆ ಎಷ್ಟು ಉಪಕಾರ ಮಾಡಬಹುದೋ ಅಷ್ಟು ಇತರೇ ಯಾವ ಉಪಾಯದಿಂದ ಸಂಭವಿಸಲ್ಲ. ಈಶ್ವರ ವಿಶ್ವಾಸವುಳ್ಳ ವ್ಯಕ್ತಿಗಳು — ರೋಗಿಗಳಿಗೂ ದುಃಖಿಗಳಿಗೂ ಪ್ರಾರ್ಥನೆ ಮಾಡಿ ಅವರ ಕಷ್ಟವನ್ನೂ ದೂರ ಮಾಡಬಹುದಾದಷ್ಟನ್ನು ಸೇವೆಯಿಂದಾಗಲಿ ಔಷಧದಿಂದಾಗಲಿ ಸಾಧ್ಯವಿಲ್ಲವೆಂದು ಹೇಳಲಾರರು.

ಆದರೆ ಈ ಸಾಮಾನ್ಯ ಯುಕ್ತಿಗಳಿಂದ ಸಾಮ್ಯವಾದಿಯನ್ನು ಸೋಲಿಸುವುದು ದುಷ್ಕರ. ಅವನು ಹೇಳುವನು — 'ಪ್ರಶ್ನಾಸೂಚಕವಾದ ಸ್ತುತಿ ಮೌಡಿ ದೇವರ ಎಷ್ಟು ಪ್ರಸನ್ನನಾಗುವನೋ — ಒಂದು ವೇಳೆ ಅವನು ವಸ್ತುತಃ ದಯಾಳುವಾಗಿದ್ದಲ್ಲಿ — ದುಃಖಿಯ ದುಃಖವನ್ನು ಹೋಗಲಾಡಿಸುವ ಪ್ರಯತ್ನದಿಂದ ಅವನು ಅತ್ಯಧಿಕ ಪ್ರಸನ್ನನಾಗುವನು. ದೇವಾಲಯವನ್ನೆ ನಿರ್ಮಿಸಿ ಅನೇಕ ವ್ಯಕ್ತಿಗಳಿಗೆ ಉಪಾಸನೆ ಮಾಡಲು ಸುಯೋಗ ಒದಗಿಸಲಾಗುವುದು ಸರಿ. ಆದರೆ ಉಪಾಸನ ಮಾಡಲಿಕ್ಕೆ ಸುಅವಸರ ಕೊಡುವುದೂ ಸ್ವಾರ್ಥಪರರಾಗಲಿಕ್ಕೆ ಅವಕಾಶ ಕೊಡುವುದೂ ಒಂದೇ ಆಗಿದೆ. ಉಪಾಸನೆ ಮಾಡುವುದಕ್ಕಿಂತ ಪರೋಪಕಾರ ಮಾಡುವುದು ಶ್ರೇಯಸ್ಕರವಾಗಿರುವಾಗ ದೇವಾಲಯ ಕಟ್ಟಿಸಿ ಉಪಾಸನೆ ಮಾಡಲು ಅನುಕೂಲಿಸುವುದಕ್ಕಿಂತ ಆಸ್ಪತ್ರೆ ತಯಾರಿಸಿ ಸೇವೆ ಮಾಡಲಿಕ್ಕೆ ಅವಕಾಶ ಕೊಡುವುದೇ ಶ್ರೇಯಸ್ಕರವಾದುದು.' ಸನಾತನ ಧರ್ಮದ ಕಡೆಯಿಂದ ಅಂತಹ ಸಂತೋಷಜನಕವಾದ ಉತ್ತರವನ್ನು ಕೊಡಬಹುದೊ; ಇತರ ಯಾವುದೇ ಧರ್ಮದ ಕಡೆಯಿಂದ ಅಂತಹ ಸಂತೋಷಪ್ರದವಾದ ಉತ್ತರವನ್ನು ಕೊಡಲಿಕ್ಕಾಗುವುದಿಲ್ಲವೆಂಬುದು ನನಗೆ ಗೊತ್ತಿದೆ. ಈ ಉತ್ತರವನ್ನು ಕೊಡಬೇಕಾದರೆ ಮಾನವನಿಗೆ ಸುಖದ ಖಣಿಗಳು ಏಕೆ ಪ್ರಾಪ್ತವಾಗುತ್ತಿವೆಯೆಂಬುದನ್ನು ವಿಚಾರಮಾಡುವುದು ಉಚಿತವಾಗಿದೆ

ಪ್ರಾಣಿಯು ಪಾಪ ಮಾಡಿದರೆ ದುಃಖವನ್ನು ಹೊಂದುವನು. ಪುಣ್ಯ ಮಾಡಿದರೆ ಸುಖವನ್ನು ಪಡೆಯುವನು ಸನಾತನ ಧರ್ಮಕ್ಕೆ ಮಿಕ್ಕ ಅನ್ಯ ಧರ್ಮಗಳಲ್ಲಿ ಈ ಸತ್ಯವು ಅಂಶಿಕರೂಪದಲ್ಲಿ ಸ್ವೀಕರಿಸಲ್ಪಟ್ಟಿದೆ. ಪ್ರಾಣಿಯು ಈ ಜನ್ಮದಲ್ಲಿ, ಏನು ಪಾಪ ಮಾಡುವನೋ, ಅದಕ್ಕೆ ಫಲ ಸ್ವರೂಪವಾಗಿ ಆತನು ಈ ಲೋಕದಲ್ಲಿ ಅಥವಾ ಪರಲೋಕದಲ್ಲಿ ದುಃಖ ಹೊಂದುವನೆಂದು ಮುಸ್ಲಿಂ ಮತ್ತು ಕ್ರೈಸ್ತ ಧರ್ಮದಲ್ಲಿ ಹೇಳಿದೆ. ಅದರಿಂದ ಈ ಜನ್ಮದಲ್ಲಿ ಮಾನವನು ಯಾವ ಸುಖ ಇಲ್ಲವೆ ದುಃಖವನ್ನು ಪಡೆಯುವನೋ, ಅದೆಲ್ಲವೂ ಈ ಜನ್ಮ ಅಥವಾ ಪೂರ್ವ ಜನ್ಮದಲ್ಲಿ ಮಾಡಿದ ಪುಣ್ಯ ಅಥವಾ ಪಾಪದ ಫಲವೆಂಬುದು ಸ್ವೀಕರಿಸಲ್ಪಟ್ಟಿಲ್ಲ. ಇದನ್ನು ಒಪ್ಪಿಕೊಳ್ಳದೆ ಸತ್ಯವು ಪೂರ್ಣರೂಪದಲ್ಲಿ ಉಪಲಬ್ಧವಾಗುವುದೂ ಇಲ್ಲ. ಈಶ್ವರನನ್ನು ನಿಷ್ಪಾಪ ಅಥವಾ ಸ್ವೇಚ್ಛಾಚಾರಿಯೆಂದು ಹೇಳಲಾಗುವುದೂ ಇಲ್ಲ. ಸನಾತನ ಧರ್ಮದ ಸಿದ್ಧಾಂತವೆಂದರೆ ಈಶ್ವರನು ಪ್ರತಿಯೊಂದು ಪ್ರಾಣಿಯ ಕರ್ಮಾನುಸಾರವಾಗಿ ಅದಕ್ಕೆ ಸುಖ ಇಲ್ಲವೇ ದುಃಖವನ್ನು ಕೊಡುವನು. ಅವನು ನ್ಯಾಯಪರಾಯಣನು. ಕರ್ಮಕ್ಕೆ ಅನುಸಾರವಾಗಿಯೇ ಎಲ್ಲರಿಗೂ ಫಲವನ್ನು ಕೊಡುವನು. ಅತನು ದಯಾಳುವು. ಪಾಪಿಯಾದರೂ ಕೂಡ ಒಂದು ವೇಳೆ ಅನುತಾಪಪಟ್ಟನಾದರೆ ಅನನ್ಯಗತಿಕನಾಗಿ ಆತನಿಗೆ ಶರಣು ಹೋದನಾದರೆ ಅತನವನನ್ನು ಉದ್ಧಾರಗೊಳಿಸುವನು. ಮಾನವನು ಪೂರ್ವಕೃತ ಕರ್ಮಗಳ ಫಲವನ್ನು ಭೋಗಿಸುವನು. ಇದಕ್ಕಾಗಿಯೇ ಯಾರ ದುಃಖವನ್ನಾದರೂ ದೂರಗೊಳಿಸುವ ಯತ್ನ ಮಾಡುವುದು ಉಚಿತವಲ್ಲವೇನು? ಸನಾತನ ಧರ್ಮಕ್ಕೆ ಅಂತಹ ಅಭಿಪ್ರಾಯವಿಲ್ಲವೆಂದು ಹೇಳಬೇಕಾಗಿಲ್ಲ ಯಾರಾನ್ನಾದರೂ ದುಃಖಿಗೊಂಡವರನ್ನು ನೋಡಿ ಅವರ ದುಃಖವನ್ನು ದೂರ ಮಾಡಲು ಪ್ರಯತ್ನಿಸುವುದು ಅವರ ಕರ್ತವ್ಯವಾಗಿದೆ. ಆದರೆ ಆ ಪ್ರಯತ್ನಕ್ಕೆ ಉದ್ದೇಶವೇನೋ ಶುದ್ಧಚಿತ್ತವಿದ್ದಿಯೇ. ನಮ್ಮ ಚಿತ್ತದಲ್ಲದಾವ ವಿಲಾಸ ವಾಸನೆಯಿದೆಯೋ, ಅದು ಪರರ ದುಃಖದಲ್ಲಿ ಸಹಾನುಭೂತಿ ತೋರುವುದರಿಂದ, ಪರರ ದುಃಖವನ್ನು ಹೋಗಲಾಡಿಸಲು ಯತ್ನಿಸುವುದರಿಂದ ದೂರವಾಗುವುದು. ಆದುದರಿಂದ ಅಂತಹ ಪ್ರಯತ್ನ ಮಾಡುವುದೇ ಉಚಿತವಾದುದು. ಆದರೆ ಹೀಗೆ ಪ್ರಯತ್ನ ಮಾಡುತ್ತಿರುವಾಗಲೂ ಕೂಡ ಈಶ್ವರನೇ ಎಲ್ಲರಿಗೂ ಅವರವರ ಕರ್ಮಾನುಸಾರವಾಗಿ ದುಃಖ ಕೊಡುತ್ತಿರುವನೆಂದೂ, ಅವನು ದುಃಖ ಕೊಡುವುದು ಅವಶ್ಯಕವೆಂದು ತಿಳಿದುದರಿಂದಲೇ ದುಃಖ ಕೊಡುವನೆಂದೂ ಮರೆಯಬಾರದು. ಅವನು ಇಚ್ಛಿಸಿದನಾದರೆ ಎಲ್ಲಾ ಜೀವರ ದುಃಖವನ್ನು ಹೋಗಲಾಡಿಸಬಲ್ಲನು. ತಂದೆಯು ಉದ್ದಂಡನಾದ ಪುತ್ರನಿಗೆ ಶಿಕ್ಷೆ ಕೊಡುವನು ಆದರೆ ಯಾರಾದರೊಂದು ವೇಳೆ ಅಂತಹ ಪುತ್ರನಲ್ಲಿ ಸಹಾನುಭೂತಿಯನ್ನು ತೋರಿಸಿದರೆ, ಅವನಿದರಿಂದ ಸಂತೋಷಗೊಳ್ಳುವನು. ಹಾಗೆಯೇ ಈಶ್ವರನೂ ಕೂಡ ಉಚ್ಛೃಂಖಲ ಸಂತಾನಕ್ಕೆ ಶಿಕ್ಷೆ ಮಾಡುವನು. ಆದರೆ ಯಾರಾದರೂ ಈ ಶಿಕ್ಷೆತನಲ್ಲಿ ಸಹಾನುಭೂತಿ ತೋರಿಸಿದರೆ, ಅವನು ಅವರ ಮೇಲೆ ಪ್ರಸನ್ನನಾಗುವನು. 'ದುಃಖಿಗಳಲ್ಲಿ ದಯೆಯಿಡು' ಇದು ಅವನದೇ ಆಜ್ಞೆಯಾಗಿದೆ. ನಾವು ಅವನ ಆಜ್ಞೆಯನ್ನು ಪಾಲಿಸತ್ತೇವೆ. ಅದರಿಂದಲೇ ದುಃಖಿಗಳ ಮೇಲೆ ದಯೆ ತೊರುವುದು ಉಚಿತ.

(ಸಶೇಷ)

Save the Cow

ಗೋವಧೆ ನಿಲ್ಲಲಿ

At Opera — Roop-Nagar From 24-10-47 MAD-MAN

.... with —

N.S.Krishnan, T A Maduram

|| ವಂದೇ ಮಾತರಂ ||

ಶ್ರೇಷ್ಠವಾದ

ರಾಜಪುರಿ ಹೊಗೇಸೊಪ್ಪಿನಿಂದ

— ತಯಾರಿಸಲ್ಪಟ್ಟಿದು —

ಕಾಂಗ್ರೆಸ್

(ರಜಿಸ್ಟರ್ಡ್)

ಮಂಗಳೂರು

ಬೀಡಿಗಳು

ಜೆ ಎಸ್. ಟೊಬ್ಯಾಕೊ ವರ್ಕ್ಸ್

ಬಸ್ ಟರ್ಮಿನಸ್, ಮೈಸೂರು